**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.252/2025**

ದೂರುದಾರರುঃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

ಆರೋಪಿತರುঃ

1. ಪಂಪಣ್ಣ ತಂದೆ ಚೆನ್ನಪ್ಪ, ವಯಸ್ಸು: 37 ವರ್ಷಗಳು,
ಉঃ ಒಕ್ಕಲುತನ,

2. ಮಾದೇವ ತಂದೆ ಚೆನ್ನಪ್ಪ, ವಯಸ್ಸು: 40 ವರ್ಷಗಳು,
ಉঃ ಒಕ್ಕಲುತನ,

3. ಉಮಾದೇವಿ ಗಂಡ ಪಂಪಣ್ಣ, ವಯಸ್ಸು: 35 ವರ್ಷಗಳು,
ಉঃ ಮನೆಕೆಲಸ,

4. ದೇವಣ್ಣ ತಂದೆ ಚೆನ್ನಪ್ಪ, ವಯಸ್ಸು: 65 ವರ್ಷಗಳು,
ಉঃ ಮನೆಕೆಲಸ,

5. ಹೊನ್ನಮ್ಮ ಗಂಡ ಮಾದೇವ, ವಯಸ್ಸು: 35 ವರ್ಷಗಳು,
ಉঃ ಒಕ್ಕಲುತನ, ಸಾঃ ಸೂರ್ಯನಾಯಕ ತಾಂಡಾ,
ರಾಯಚೂರು.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 20.01.2025 ರಂದು ಬೆಳಿಗ್ಗೆ 08.40 ಗಂಟೆ ಸಮಯದಲ್ಲಿ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಸಮುದ್ರ ಗ್ರಾಮದಲ್ಲಿ ಸಾಕ್ಷಿ–1 ಮತ್ತು 4 ರಿಂದ 6 ರವರು ತಮ್ಮ ಹೊಲದಲ್ಲಿ ಸ್ಪಿಂಕಲರ್ ಪೈಪ್‌ನಿಂದ ನೀರು ಕಟ್ಟುತ್ತಿರುವಾಗ 1 ರಿಂದ 5 ನೇ ಆರೋಪಿತರಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.189(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 5 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.191(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 1 ಮತ್ತು 6 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.329(3) ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಹೊಟ್ಟೆಗೆ ಒದ್ದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಲ್ಲನ್ನು ತೆಗೆದುಕೊಂಡು ಮೂಗಿನ ಹತ್ತಿರ ಹೊಡೆದು ರಕ್ತಗಾಯ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹವಾಚಕ ಕಲಂ 190 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರಾದ ನೀವುಗಳು, ಸಾಕ್ಷಿ-1 ರವರಿಗೆ ಈ ಸೂಳೆ ಮಕ್ಕಳನ್ನು ಹಾಕಿ ಒದಿರಿ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 6 ನೇ ಆರೋಪಿತರಾದ ನೀವುಗಳು, ಸಾಕ್ಷಿ-1 ಮತ್ತು 4 ರಿಂದ 6 ರವರಿಗೆ ಜಗಳ ಬಿಡಿಸಿದ್ದರಿಂದ ಉಳಿದುಕೊಂಡಿದ್ದೀರಿ ಇಲ್ಲದಿದ್ದರೆ ನಿಮ್ಮನ್ನು ಜೀವ ಸಹಿತ ಬಿಡುತ್ತಿರಲಿಲ್ಲ ಅಂತಾ ಜೀವದ

ಬೆದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 31.12.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.252/2025**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಪಂಪಣ್ಣ ತಂದೆ ಚಿನ್ನಪ್ಪ,
2. ಮಾದೇವ ತಂದೆ ಚಿನ್ನಪ್ಪ,
3. ಉಮಾದೇವಿ ಗಂಡ ಪಂಪಣ್ಣ,
4. ದೇವಣ್ಣ ತಂದೆ ಚಿನ್ನಪ್ಪ,
5. ಹೊನ್ನಮ್ಮ ಗಂಡ ಮಾದೇವ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.